**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಹತ್ತನೇ ಅಧಿವೇಶನ**

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ವಿಧೇಯಕ, 2026

**(2026ರ ವಿಧಾನಸಭೆಯ ವಿಧೇಯಕ ಸಂಖ್ಯೆ–21)**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಎಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ಎರಡನೇ ತಿದ್ದುಪಡಿ) ಅಧಿನಿಯಮ, 2026 ಎಂದು ಕರೆಯತಕ್ಕದ್ದು.

(2) ಇದು 2026ರ ಜುಲೈ 16ನೇ ದಿನಾಂಕದಿಂದ ಜಾರಿಗೆ ಬಂದಿರುವುದಾ ಭಾವಿಸತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ .-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದ (33)ನೇ ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(33) "ಸಾರ್ವಜನಿಕ ಬೀದಿ" ಎಂದರೆ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಅಥವಾ ಸರ್ಕಾರ ಅಥವಾ ಯಾವುದೇ ಸಾರ್ವಜನಿಕ ಪ್ರಾಧಿಕಾರಗಳ ಮೂಲಕ ಪ್ರಯಾಣ ದರದ ಮೂಲಕವಾಗಲಿ ಅಥವಾ ಇಲ್ಲದೆಯೇ ನಿರ್ವಹಿಸುತ್ತಿರುವ, ಸಾರ್ವಜನಿಕರು ದಾರಿಯ ಹಕ್ಕನ್ನು ಹೊಂದಿರುವ ಯಾವುದೇ ಬೀದಿ, ರಸ್ತೆ ಚೌಕ, ತುಂಡು ಬೀದಿ, ಓಣಿ, ಮಾರ್ಗ ಅಥವಾ ಸವಾರಿ ದಾರಿ ಮತ್ತು ಅದು,-

(ಎ) ಯಾವುದೇ ಸಾರ್ವಜನಿಕ ಸೇತುವೆಯ ಮೇಲಿನ ಸಂಚಾರ ಮಾರ್ಗವನ್ನು ಅಥವಾ ಒಡ್ಡುದಾರಿಯನ್ನು;

(ಬಿ) ಯಾವುದೇ ಅಂಥ ಬೀದಿ, ಸಾರ್ವಜನಿಕ ಸೇತುವೆಗೆ ಅಥವಾ ಒಡ್ಡುದಾರಿಗೆ ಲಗತ್ತಾಗಿರುವ ಕಾಲುದಾರಿಯನ್ನು; ಮತ್ತು

(ಸಿ) ಯಾವುದೇ ಅಂಥ ಬೀದಿ, ಸಾರ್ವಜನಿಕ ಸೇತುವೆ ಅಥವಾ ಒಡ್ಡುದಾರಿಗೆ ಲಗತ್ತಾಗಿರುವ ಚರಂಡಿಗಳು ಮತ್ತು ಹೊಂದಿಕೊಂಡಿರುವ ಸ್ವತ್ತು ಖಾಸಗಿ ಸ್ವತ್ತಾಗಿರಲಿ ಅಥವಾ ಸರ್ಕಾರಕ್ಕೆ ಅಥವಾ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸ್ವತ್ತಾಗಿರಲಿ, ಅದರ ಎಲ್ಲೆಗಳವರೆಗೆ ಸಂಚಾರ ಮಾರ್ಗದ ಎರಡೂ ಬದಿಗಳಲ್ಲಿ ಇರುವ, ಯಾವುದೇ ನೆಲಗಟ್ಟಿನ ಕಾಲುದಾರಿ, ವರಾಂಡ ಅಥವಾ ಇತರ ರಚನೆಯಿಂದ ಆವೃತವಾಗಿರುವ ಅಥವಾ ಆವೃತವಾಗಿಲ್ಲದಿರುವ ಭೂಮಿಯನ್ನು,

- ಒಳಗೊಳ್ಳುತ್ತದೆ; "

**3. ಹೊಸ ಪ್ರಕರಣ 63ಎ ಸೇರ್ಪಡೆ.-** ಮೂಲ ಅಧಿನಿಯಮದ 63ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

**"63ಎ. ಯಾವುದೇ ಬೀದಿಯನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅಧಿಕಾರ.-** (1) ಚರಂಡಿ ಸೇರಿದಂತೆ ಯಾವುದೇ ಖಾಸಗಿ ಬೀದಿಯು ಸಾರ್ವಜನಿಕರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಅಪಾಯವಾಗುವಂಥ ಸ್ಥಿತಿಯಲ್ಲಿದ್ದರೆ ಕಮೀಷನರ್ ಅಥವಾ ಚೀಫ್ ಆಫೀಸರ್ ಆ ಖಾಸಗಿ ಬೀದಿಗೆ ಸಂಬಂಧಿಸಿದಂತೆ ತಾನೇ ಸ್ವತಃ ಅಥವಾ ಸದರಿ ಖಾಸಗಿ ಬೀದಿಯ ಮಾಲೀಕರ ಅಥವಾ ಅಂಥ ಬೀದಿಯ ಮುಂಭಾಗದಲ್ಲಿರುವ ಅಥವಾ ಹೊಂದಿಕೊಂಡಿರುವ ಕಟ್ಟಡದ ಅಥವಾ ಭೂಮಿಗಳ ಮಾಲೀಕರ ಕೋರಿಕೆಯ ಮೇರೆಗೆ ಸಾರ್ವಜನಿಕ ನೋಟೀಸು ಮತ್ತು ಅಂಥ ಮಾಲೀಕರಿಗೆ ನೋಟಿಸ್ ನೀಡುವ ಮೂಲಕ ಸದರಿ ಖಾಸಗಿ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿಯನ್ನಾಗಿ ಘೋಷಿಸುವ ಅದರ ಉದ್ದೇಶವನ್ನು ತಿಳಿಸತಕ್ಕದ್ದು. ಆನಂತರ, ಅಂಥ ಮಾಲೀಕರು ಅಥವಾ ಯಾರೇ ಹಿತಾಸಕ್ತಿಯುಳ್ಳ ವ್ಯಕ್ತಿಯು ಸದರಿ ಉದ್ದೇಶದ ವಿರುದ್ಧ ಯಾವುದೇ ಆಕ್ಷೇಪಣೆಗಳೇನಾದರು ಇದ್ದರೆ ಅಂಥ ಸಾರ್ವಜನಿಕ ನೋಟಿಸ್ ಜಾರಿ ಮಾಡಿದ ದಿನಾಂಕದಿಂದ ಒಂದು ತಿಂಗಳ ಒಳಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಅಧಿಕೃತ ಪ್ರಾಧಿಕಾರವು ಆಕ್ಷೇಪಣೆಗಳೇನಾದರು ಇದ್ದರೆ, ಅವುಗಳನ್ನು ಪರಿಶೀಲಿಸಿದ ತರುವಾಯ ಅಂಥ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸಬಹುದು:

ಪರಂತು, ಖಾಸಗಿ ಬೀದಿಯು ಒಂದಕ್ಕಿಂತ ಹೆಚ್ಚಿನ ಗ್ರಾಮ ಪಂಚಾಯತಿಗಳಲ್ಲಿ ಬರುವ ಸಂದರ್ಭದಲ್ಲಿ, ಸಂಬಂಧಪಟ್ಟ ಅಧಿಕೃತ ಪ್ರಾಧಿಕಾರವು ನೋಟಿಸ್ ನೀಡತಕ್ಕದ್ದು ಮತ್ತು ಆನಂತರ ತನ್ನ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಆ ಬೀದಿ ಅಥವಾ ಅದರ ಭಾಗವನ್ನು ಸಾರ್ವಜನಿಕ ಬೀದಿ ಎಂಬುದಾಗಿ ಘೋಷಿಸತಕ್ಕದ್ದು:

ಇದು ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದ ಅಂಥ ಪ್ರಕರಣ ಮತ್ತು ಅಂಥ ಅವಧಿಗಾಗಿ ಅನ್ವಯವಾಗತಕ್ಕದ್ದು:

ಮತ್ತು ಪರಂತು, ಸಾರ್ವಜನಿಕ ಬೀದಿಯೆಂದು ಘೋಷಿಸುವ ಖಾಸಗಿ ಬೀದಿಯು ಸಾರ್ವಜನಿಕ ರಸ್ತೆ ಅಥವಾ ಸಾರ್ವಜನಿಕ ಬೀದಿಯಿಂದ ಸಂಪರ್ಕ ಹೊಂದಿರತಕ್ಕದ್ದು:

ಅಲ್ಲದೇ ಪರಂತು, ಸಾರ್ವಜನಿಕ ಬೊಕ್ಕಸದಿಂದ ನಿಧಿಯನ್ನು ಬಳಸಿ ಮಾಡಿದ ಮತ್ತು ನಿರ್ಮಿಸಿದ ರಸ್ತೆಯ ಸಂಬಂಧದಲ್ಲಿ ಸಹ ಅಂಥ ಘೋಷಣೆಯನ್ನು ಮಾಡಬಹುದು.

(2) ಬೀದಿ ಅಥವಾ ಅಂಥ ಬೀದಿಯ ಭಾಗವನ್ನು ಹಿಂದಿನ ಭೂ ಮಾಲೀಕನು ವರ್ಗಾವಣೆ ಅಥವಾ ಹಸ್ತಾಂತರಣದ ನೋಂದಾಯಿತ ಕ್ರಯಪತ್ರದಲ್ಲಿ ರಸ್ತೆಯನ್ನಾಗಿ ತೋರಿಸಿದ್ದಲ್ಲಿ ಮತ್ತು ಅದನ್ನಾಧರಿಸಿ ಕಟ್ಟಡದ ನಿವೇಶನಕ್ಕೆ ಹೊಂದಿಕೊಂಡಿರುವಂತೆ ಭೂ ಮಾಲೀಕನು ಹೊಂದಿಕೊಂಡಿರುವ ಕಟ್ಟಡ ನಿವೇಶನಗಳನ್ನು ಮಾರಾಟ ಅಥವಾ ವರ್ಗಾವಣೆ ಮಾಡುವ ಮೂಲಕ ಅಂಥ ರಸ್ತೆ ಅಥವಾ ಬೀದಿಯ ಪ್ರಯೋಜನವನ್ನು ಪಡೆದುಕೊಂಡಿರುವಲ್ಲಿ ಮತ್ತು (1)ನೇ ಉಪ ಪ್ರಕರಣದ ಮೇರೆಗೆ ಅಂಥ ರಸ್ತೆಯನ್ನು ಸಾರ್ವಜನಿಕ ಬೀದಿಯಾಗಿ ಘೋಷಿಸಿರುವಲ್ಲಿ, ಭೂ ಮಾಲೀಕನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ 14ಬಿ ಪ್ರಕರಣದ ಮೇರೆ ಅಭಿವೃದ್ಧಿ ಹಕ್ಕುಗಳ ಪ್ರಮಾಣಪತ್ರ ಸೇರಿದಂತೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ನ್ಯಾಯೋಜಿತ ಪರಿಹಾರ, ಪುನರ್ ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ಅಧಿನಿಯಮ, 2013(2013ರ ಕೇಂದ್ರ ಅಧಿನಿಯಮ 30) ಅಥವಾ ಯಾವುದೇ ಇತರೆ ಕಾನೂನಿನ ಅಡಿಯಲ್ಲಿ ಯಾವುದೇ ರೀತಿಯ ಪರಿಹಾರಕ್ಕೆ ಅರ್ಹನಾಗತಕ್ಕದ್ದಲ್ಲ.

**4. ತೊಂದರೆಗಳ ನಿವಾರಣೆ.-** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ, ಯಾವುದೇ ತೊಂದರೆ ಉದ್ಭವಿಸಿದರೆ, ಸಂದರ್ಭವು ಅಗತ್ಯಪಡಿಸಬಹುದಾದಂತೆ, ತೊಂದರೆಯನ್ನು

ನಿವಾರಿಸಲು ಅವಶ್ಯಕವೆಂದು ಕಂಡುಬರುವ ಯಾವುದನ್ನಾದರೂ, ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ಮಾಡಬಹುದು.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೇ ರಾಜ್ಯ ವಿಧಾನ ಮಂಡಲದ ಉಭಯ ಸದನದ ಮುಂದೆ ಮಂಡಿಸತಕ್ಕದ್ದು.

**5. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 2026 (2026ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 01) ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನದಲ್ಲಿ ಏನೇ ಒಳಗೊಂಡಿದ್ದರೂ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧ್ಯಾದೇಶ, 2026 (2026ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 01) ರಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಗ್ರಾಮ ಪಂಚಾಯಿತಿಗಳು ಗ್ರಾಮೀಣ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಾಗಿದ್ದು, ಅವುಗಳ ಎಲ್ಲಾ ಅವಶ್ಯಕ ಮೂಲಸೌಕರ್ಯಗಳನ್ನು ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆಗಳಿಂದ ಸಂಗ್ರಹಿಸಿ ಒದಗಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಗಳು ಸಕ್ರಮ ಸ್ವತ್ತುಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿರುವುದರಿಂದ ಮತ್ತು ಸಂಗ್ರಹಿಸುತ್ತಿರುವುದರಿಂದ;

ಗ್ರಾಮೀಣ ಜನಸಂಖ್ಯೆ ವೃದ್ಧಿಸುತ್ತಿದ್ದು, ಹಳ್ಳಿಗಳಲ್ಲಿ ಯೋಜನಾರಹಿತ ವಿಧಾನದಲ್ಲಿ ಭೂ ಪರಿವರ್ತನೆ ಮತ್ತು ನಕ್ಷೆಯ ಅನುಮೋದನೆ ಇಲ್ಲದೆ ಅಕ್ರಮ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ. ನಕ್ಷೆ ಮಂಜೂರಾತಿ ಮತ್ತು ಯುಕ್ತ ಪ್ರಾಧಿಕಾರದಿಂದ ಅನುಮೋದನೆಯಿಲ್ಲದೆ ಹಲವು ಅನಧಿಕೃತ ಕಟ್ಟಡಗಳನ್ನು ಕಟ್ಟಲಾಗುತ್ತಿರುವುದರಿಂದ;

ಅನುಮೋದನೆಯಿಲ್ಲದ ಬಡಾವಣೆಗಳ ಹೆಚ್ಚಳವನ್ನು ತಡೆಗಟ್ಟಲು ಮತ್ತು ಗ್ರಾಮ ಪಂಚಾಯಿತಿಗಳ ಸಂಪನ್ಮೂಲವನ್ನೂ ಸಹ ವೃದ್ಧಿಸಲು, ಈ ಸ್ವತ್ತುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಮತ್ತು ಸಂಗ್ರಹಿಸಲು ಉದ್ದೇಶಿಸಲಾಗಿದೆ. ಮಾದರಿ ಕಟ್ಟಡ ಉಪ-ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕಂದಾಯ ಭೂಮಿಯಲ್ಲಿ ಕಟ್ಟಲಾದ ಕಟ್ಟಡ ಅಥವಾ ಪರಿವರ್ತನೆಯಾಗದೇ ಇರುವ ಭೂಮಿ ಅಥವಾ ಪರಿವರ್ತನೆಯಾದ ಆದರೆ ಅನುಮೋದನೆಯಾಗದೇ ಇರುವ ಬಡಾವಣೆ ಅಥವಾ ಅಧಿಭೋಗ ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ನೀಡದೆಯೇ ಅಧಿಭೋಗಿಸುತ್ತಿರುವ ಕಟ್ಟಡವನ್ನು ಒಳಗೊಂಡು, ಪ್ರತಿ ಕಟ್ಟಡ, ಖಾಲಿ ನಿವೇಶನ ಅಥವಾ ಅವೆರಡರಿಂದಲೂ, ದಿನಾಂಕ: 07.04.2025ಕ್ಕೆ ಮೊದಲು ಅಂದರೆ 199-ಸಿ ಪ್ರಕರಣದ ಸೇರ್ಪಡೆ ದಿನಾಂಕಕ್ಕೆ ಮೊದಲು ನಿರ್ಮಿಸಿದ ಸ್ವತ್ತುಗಳಿಗಾಗಿ ಮಾತ್ರ ಸ್ವತ್ತು ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರವನ್ನು ನೀಡಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025ಕ್ಕೆ 199-ಸಿ ಪ್ರಕರಣವನ್ನು ಸೇರಿಸಲಾಗಿರುವುದರಿಂದ;

ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಸ್ವತ್ತುಗಳನ್ನು ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆಯದೇ ಸೃಜಿಸಲಾಗಿದೆ. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಉಲ್ಲಂಘಿಸಿ ಸೂಕ್ತ ಕುಡಿಯುವ ನೀರಿನ ಸೌಲಭ್ಯ, ರಸ್ತೆಗಳು ಮತ್ತು ಚರಂಡಿಗಳಿಲ್ಲದೆ ಅಕ್ರಮ ಸ್ವತ್ತುಗಳ ಹೆಚ್ಚಳಕ್ಕೆ ಕಾರಣವಾಗಿರುವುದರಿಂದ;

ಇದೇ ರೀತಿಯ ತಿದ್ದುಪಡಿಗಳನ್ನು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36), ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ಗಳಿಗೂ ಸಹ ತಂದಿರುವುದರಿಂದ ;

ಈ ಸ್ವತ್ತುಗಳನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ನಿಯಂತ್ರಣಾ ಚೌಕಟ್ಟಿನೊಳಗೆ ತರಲು ಹಾಗೂ ಸಾರ್ವಜನಿಕ ಸುರಕ್ಷತೆ ಮತ್ತು ಆರೋಗ್ಯದ ಹಿತಾಸಕ್ತಿಯಲ್ಲಿ ಅಂಥ ಸ್ವತ್ತುಗಳನ್ನು ನಿಯಂತ್ರಿಸಲು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯಿತಿ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ 2ನೇ ಪ್ರಕರಣದ (33)ನೇ ಖಂಡಕ್ಕೆ ತಿದ್ದುಪಡಿ ತರುವುದು ಮತ್ತು 63(ಎ)ಹೊಸ ಪ್ರಕರಣವನ್ನು ಸೇರಿಸುವುದು ಅವಶ್ಯಕವಾಗಿರುವುದರಿಂದ;

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯಿತಿ (ತಿದ್ದುಪಡಿ) ಅಧ್ಯಾದೇಶ, 2026 (2026ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ಕರ್ನಾಟಕ ವಿಧಾನ ಸಭೆಯ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ಗ್ರಾಮ ಪಂಚಾಯಿತಿಗಳು ಗ್ರಾಮೀಣ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಾಗಿದ್ದು, ಅವುಗಳ ಎಲ್ಲಾ ಅವಶ್ಯಕ ಮೂಲಸೌಕರ್ಯಗಳನ್ನು ಕಟ್ಟಡಗಳು ಮತ್ತು ಭೂಮಿಗಳ ಮೇಲಿನ ತೆರಿಗೆಗಳಿಂದ ಸಂಗ್ರಹಿಸಿ ಒದಗಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಗಳು ಸಕ್ರಮ ಸ್ವತ್ತುಗಳ ಮೇಲೆ ತೆರಿಗೆಗಳನ್ನು ವಿಧಿಸುತ್ತಿರುವುದರಿಂದ ಮತ್ತು ಸಂಗ್ರಹಿಸುತ್ತಿರುವುದರಿಂದ;

ಗ್ರಾಮೀಣ ಜನಸಂಖ್ಯೆ ವೃದ್ಧಿಸುತ್ತಿದ್ದು, ಹಳ್ಳಿಗಳಲ್ಲಿ ಯೋಜನಾರಹಿತ ವಿಧಾನದಲ್ಲಿ ಭೂ ಪರಿವರ್ತನೆ ಮತ್ತು ನಕ್ಷೆಯ ಅನುಮೋದನೆ ಇಲ್ಲದೆ ಅಕ್ರಮ ಬಡಾವಣೆಗಳನ್ನು ನಿರ್ಮಿಸಲಾಗುತ್ತಿದೆ. ನಕ್ಷೆ ಮಂಜೂರಾತಿ ಮತ್ತು ಯುಕ್ತ ಪ್ರಾಧಿಕಾರದಿಂದ ಅನುಮೋದನೆಯಿಲ್ಲದೆ ಹಲವು ಅನಧಿಕೃತ ಕಟ್ಟಡಗಳನ್ನು ಕಟ್ಟಲಾಗುತ್ತಿರುವುದರಿಂದ;

ಅನುಮೋದನೆಯಿಲ್ಲದ ಬಡಾವಣೆಗಳ ಹೆಚ್ಚಳವನ್ನು ತಡೆಗಟ್ಟಲು ಮತ್ತು ಗ್ರಾಮ ಪಂಚಾಯಿತಿಗಳ ಸಂಪನ್ಮೂಲವನ್ನೂ ಸಹ ವೃದ್ಧಿಸಲು, ಈ ಸ್ವತ್ತುಗಳ ಮೇಲೆ ತೆರಿಗೆಗಳನ್ನು ವಿಧಿಸಲು ಮತ್ತು ಸಂಗ್ರಹಿಸಲು ಉದ್ದೇಶಿಸಲಾಗಿದೆ. ಮಾದರಿ ಕಟ್ಟಡ ಉಪ-ವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಕಂದಾಯ ಭೂಮಿಯಲ್ಲಿ ಕಟ್ಟಲಾದ ಕಟ್ಟಡ ಅಥವಾ ಪರಿವರ್ತನೆಯಾಗದೇ ಇರುವ ಭೂಮಿ ಅಥವಾ ಪರಿವರ್ತನೆಯಾದ ಆದರೆ ಅನುಮೋದನೆಯಾಗದೇ ಇರುವ ಬಡಾವಣೆ ಅಥವಾ ಅಧಿಭೋಗ ಅಥವಾ ಪೂರ್ಣಗೊಳಿಸಿದ ಪ್ರಮಾಣಪತ್ರವನ್ನು ನೀಡದೆಯೇ ಅಧಿಭೋಗಿಸುತ್ತಿರುವ ಕಟ್ಟಡವನ್ನು ಒಳಗೊಂಡು, ಪ್ರತಿ ಕಟ್ಟಡ, ಖಾಲಿ ನಿವೇಶನ ಅಥವಾ ಅವೆರಡರಿಂದಲೂ, ದಿನಾಂಕ: 07.04.2025ಕ್ಕೆ ಮೊದಲು ಅಂದರೆ 199-ಸಿ ಪ್ರಕರಣದ ಸೇರ್ಪಡೆ ದಿನಾಂಕಕ್ಕೆ ಮೊದಲು ನಿರ್ಮಿಸಿದ ಸ್ವತ್ತುಗಳಿಗಾಗಿ ಮಾತ್ರ ಸ್ವತ್ತು ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಸಂಗ್ರಹಿಸುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರವನ್ನು ನೀಡಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2025ಕ್ಕೆ 199-ಸಿ ಪ್ರಕರಣವನ್ನು ಸೇರಿಸಲಾಗಿರುವುದರಿಂದ;

ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಸ್ವತ್ತುಗಳನ್ನು ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆಯದೇ ಸೃಜಿಸಲಾಗಿದೆ. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ಉಪಬಂಧಗಳನ್ನು ಉಲ್ಲಂಘಿಸಿ ಸೂಕ್ತ ಕುಡಿಯುವ ನೀರಿನ ಸೌಲಭ್ಯ, ರಸ್ತೆಗಳು ಮತ್ತು ಚರಂಡಿಗಳಿಲ್ಲದೆ ಅಕ್ರಮ ಸ್ವತ್ತುಗಳ ಹೆಚ್ಚಳಕ್ಕೆ ಕಾರಣವಾಗಿರುವುದರಿಂದ;

ಇದೇ ರೀತಿಯ ತಿದ್ದುಪಡಿಗಳನ್ನು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024 (2025ರ ಕರ್ನಾಟಕ ಅಧಿನಿಯಮ 36), ಕರ್ನಾಟಕ ಮುನ್ಸಿಪಾಲಿಟಿಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22) ಮತ್ತು ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14)ಗಳಿಗೂ ಸಹ ತಂದಿರುವುದರಿಂದ ;

ಈ ಸ್ವತ್ತುಗಳನ್ನು ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11)ರ ನಿಯಂತ್ರಣಾ ಚೌಕಟ್ಟಿನೊಳಗೆ ತರಲು ಹಾಗೂ ಸಾರ್ವಜನಿಕ ಸುರಕ್ಷತೆ ಮತ್ತು ಆರೋಗ್ಯದ ಹಿತಾಸಕ್ತಿಯಲ್ಲಿ ಅಂಥ ಸ್ವತ್ತುಗಳನ್ನು ನಿಯಂತ್ರಿಸಲು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು

ಪಂಚಾಯಿತಿ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14)ರ 2ನೇ ಪ್ರಕರಣದ (33)ನೇ ಖಂಡಕ್ಕೆ ತಿದ್ದುಪಡಿ ತರುವುದು ಮತ್ತು 63(ಎ)ಹೊಸ ಪ್ರಕರಣವನ್ನು ಸೇರಿಸುವುದು ಅವಶ್ಯಕವಾಗಿರುವುದರಿಂದ;

ವಿಷಯವು ತುರ್ತುಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯಿತಿ (ತಿದ್ದುಪಡಿ) ಅಧ್ಯಾದೇಶ, 2026 (2026ರ ಕರ್ನಾಟಕ ಅಧ್ಯಾದೇಶ ಸಂ. 01)ನ್ನು ಪ್ರಖ್ಯಾಪಿಸಲಾಗಿತ್ತು.

ಈ ವಿಧೇಯಕವು ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

**ಈಶ್ವರ್ ಖಂಡ್ರೆ**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993**

**(1993ರ ಕರ್ನಾಟಕ ಅಧಿನಿಯಮ ಸಂ. 14)ರ ಉದ್ಧೃತ ಭಾಗ.**

**XXX XXX XXX**

**2. ಅರ್ಥ ವಿವರಣೆಗಳು.- XXX XXX XXX**

(33) "ಸಾರ್ವಜನಿಕ ಬೀದಿ'' ಎಂದರೆ, ಅದು ಮುಖ್ಯ ರಸ್ತೆಯಾಗಿರಲಿ ಅಥವಾ ಇಲ್ಲದಿರಲಿ ಸಾರ್ವಜನಿಕರಿಗೆ ದಾರಿಹಕ್ಕು ಇರುವ ಯಾವುದೇ ಬೀದಿ;

**XXX XXX XXX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 500+100, 21ನೇ ಆಗಸ್ಟ್ 2026

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**TENTH SESSION**

# THE KARNATAKA GRAM SWARAJ AND PANCHAYAT RAJ (SECOND AMENDMENT) BILL, 2026

**(LA Bill No. 21 of 2026)**

A Bill further to amend the Karnataka Gram Swaraj and Panchayat Raj Act, 1993 (Karnataka Act 14 of 1993).

Whereas it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the seventy-seventh year of the Republic of India, as follows:-

**1. Short title and commencement.-** (1) This Act may be called the Karnataka Gram Swaraj and Panchayat Raj (Second Amendment) Act, 2026.

(2) It shall deemed to have come into force with effect from 16th day of July, 2026.

**2. Amendment of section 2.-** In the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the principal Act) in section 2, for clause (33), the following shall be substituted, namely:-

"(33) "Public Street" means any street, road, square, court, alley, passage or riding path over which the public have a right of way maintained by the Rural Local Bodies or Government or by any public authorities, whether a thoroughfare or not and includes,-

(a) the roadway over any public bridge or causeway;

(b) the footway attached to any such street public bridge or causeway; and

(c) the drains attached to any such street, public bridge or causeway and the land, whether covered or not by any pavement verandah or other

structure which lies on either side of the roadway upto the boundaries of the adjacent property, whether that property is private property or property belonging to the Government or the Rural Local Bodies."

**3. Insertion of new section 63-A.-** In the Principal Act, after section 63, the following shall be inserted, namely:-

**"63-A. Power to declare any street as public street.-** (1) If a private street including the drains are in such a poor condition that endangers public safety and health, an authority authorized by the Government may, with respect to a private street, on his own accord or upon a request by the owners of the said private street or the owners of the buildings and lands fronting or abutting on such a street, by a public notice and notice to such owners, inform the intention to declare the said private street or part thereof, as a public street. Thereupon, such owners or anyone else interested, may give objections, if any, against the said intention within stipulated time specified in public notice by affixture. Upon considering the objections if any, an authority authorized by the Government may, declare such street or part thereof to be a public street:

Provided that, in case the private street falls in more than one Gram Panchayat then the concerned authority authorized by the Government shall issue the notice and thereupon declare the street or part thereof as a public street in respect to his jurisdiction.

This shall be applicable in such case and for such duration as notified by the Government from time to time.

Provided that, the private street to be declared as public street shall have connectivity from the public road or public street.

Provided further that, such a declaration may also be made with respect to a road which has been laid and constructed using funds from the public exchequer.

(2) Where, street or part of such street which was shown by the erstwhile land owner as road in the registered deed of transfer or conveyance made by the land owner and based upon which the abutting building sites were carved out by the land owner, who has obtained the benefit of such

road or street by making the sale or transfer of abutting building sites and such a road is declared as public street under sub-section (1), in that event the land owner, shall not be eligible for any type of compensation under Right to Fair Compensation and Transparency in Land Acquisition, Rehabilitation and Resettlement Act, 2013 (Central Act 30 of 2013)or any other law, including Development Rights Certificates under section 14-B of the Karnataka Town and Country Planning Act, 1961 (Karnataka Act 11 of 1963).

**4. Power to remove difficulties.-** (1) If any difficulty arises in giving effect to the provisions of this Act , the Government may by order, published in the official Gazette, as the occasion may require, do anything which appears to it to be necessary to remove the difficulty.

(2) Every order made under this section shall, as soon as may be after it is so made, be laid before the both House of the State Legislature.

**5. Repeal and savings.-** (1) The Karnataka Gram Swaraj and Panchayat Raj (Amendment) Ordinance, 2026 (Karnataka Ordinance No. 01 of 2026) is here by repealed.

(2) Notwithstanding such repeal, anything done or deemed to have been done or any action taken or deemed to have been taken under the Karnataka Gram Swaraj and Panchayat Raj (Amendment) Ordinance, 2026 (Karnataka Ordinance No. 01 of 2026) shall be deemed to have been done under this Act.

**STATEMENT OF OBJECTS AND REASONS**

Whereas, Grama Panchayats are rural local self Governments, all necessary infrastructures are provided from the taxes collected on buildings and lands. Grama Panchayats are levying and collecting taxes from regular properties.

Whereas, increase in rural population, villages are extending in unplanned manner with the creation of irregular layouts without land conversion and plan approval. There are many unauthorized buildings which are built without sanctioned plan and approval from appropriate authority.

Whereas, to stop growth of unapproved layouts and also to improve the Grama Panchayats resources, it is intended to levy and collect taxes on these properties. Section 199-C was inserted by the Karnataka Grama Swaraj and Panchayat Raj (Amendment) Act, 2025 (Karnataka Act 27 of 2025) which empowered the Grama Panchayat to levy and collect the property tax from every building, vacant land or both, including a building constructed in violation of the provisions of Model building bye-laws or unconverted land or converted land but unapproved layout in a revenue land or from a building occupied without issuance of Occupancy or Completion certificate, only for the property created prior to the date of insertion of section 199-C that is before 07.04.2025.

Whereas, there are lakhs of properties in rural areas which are created without approval of the appropriate authority. It has led to irregular growth without proper drinking water facilities, roads and drainages violating provisions of the Karnataka Town and Country Planning Act, 1961 (Karnataka Act 11 of 1963).

Whereas, similar amendments have been brought to the Greater Bengaluru Governance Act, 2024 (Karnataka Act 36 of 2025), the Karnataka Municipalities Act, 1964 (Karnataka Act 22 of 1964) and to the Karnataka Municipal Corporation Act 1976 (Karnataka Act 14 of 1977).

Whereas, to bring these properties within the regulatory framework of the Karnataka Town and Country Planning Act, 1961 (Karnataka Act 11 of 1963) and to control such properties in the interest of public safety and health, it is necessary to amend clause (33) of section 2 and insert a new section 63A to the Karnataka Grama Swaraj and Panchayat Raj Act, 1993 (Karnataka Act 14 of 1993).

And whereas, the matter was urgent and both Houses of the State Legislature were not in session therefore the Karnataka Gram Swaraj and Panchayat Raj (Amendment) Ordinance, 2026 (Karnataka Ordinance No. 01 of 2026) was promulgated.

This Bill seeks to replace the above ordinance.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY.**

Whereas, Grama Panchayats are rural local self Governments, all necessary infrastructures are provided from the taxes collected on buildings and lands. Grama Panchayats are levying and collecting taxes from regular properties.

Whereas, increase in rural population, villages are extending in unplanned manner with the creation of irregular layouts without land conversion and plan approval. There are many unauthorized buildings which are built without sanctioned plan and approval from appropriate authority.

Whereas, to stop growth of unapproved layouts and also to improve the Grama Panchayats resources, it is intended to levy and collect taxes on these properties. Section 199-C was inserted by the Karnataka Grama Swaraj and Panchayat Raj (Amendment) Act, 2025 (Karnataka Act 27 of 2025) which empowered the Grama Panchayat to levy and collect the property tax from every building, vacant land or both, including a building constructed in violation of the provisions of Model building bye-laws or unconverted land or converted land but unapproved layout in a revenue land or from a building occupied without issuance of Occupancy or Completion certificate, only for the property created prior to the date of insertion of section 199-C that is before 07.04.2025.

Whereas, there are lakhs of properties in rural areas which are created without approval of the appropriate authority. It has led to irregular growth without proper drinking water facilities, roads and drainages violating provisions of the Karnataka Town and Country Planning Act, 1961 (Karnataka Act 11 of 1963).

Whereas, to bring these properties within the regulatory framework of the Karnataka Town and Country Planning Act, 1961 (Karnataka Act 11 of 1963) and to control such properties in the interest of public safety and health, it is necessary to amend clause (33) of section 2 and insert a new section 63A to the Karnataka Grama Swaraj and Panchayat Raj Act, 1993 (Karnataka Act 14 of 1993).

Whereas, similar amendments have been brought to the Greater Bengaluru Governance Act, 2024 (Karnataka Act 36 of 2025), the Karnataka Municipalities Act, 1964 (Karnataka Act 22 of 1964) and to the Karnataka Municipal Corporation Act 1976 (Karnataka Act 14 of 1977).

And whereas, the matter was urgent and both Houses of the State Legislature were not in session therefore the Karnataka Gram Swaraj and Panchayat Raj (Amendment) Ordinance, 2026 (Karnataka Ordinance No. 01 of 2026) was promulgated.

This Bill seeks to replace the above ordinance.

**ESHWAR KHANDRE**
Minister for Rural Development
and Panchayat Raj

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA GRAM SWARAJ AND PANCHAYAT RAJ ACT, 1993 (KARNATAKA ACT 14 OF 1993).**

**XX XX XX**

**2. Definitions.- XX XX XX**

(33) “public street” means any street over which the public have a right of way whether a thoroughfare or not;

**XX XX XX**

Govt. Press, Vikasa Soudha, Bengaluru, 21ST August, 2026, P7, W.D. , Copies 500+100